**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ಸಿ.ಸಿ. ಸಂಖ್ಯೆ:4226/2024**

| | |
|---|---|
| ಫ್ರಾಸಾ : | 02 |
| ಚಾಸಾ : | 02 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 15.07.2026.**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ |
| ತಂದೆಯ ಹೆಸರು | : | ಮೂಡಲಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಯಗಟಿ ಗ್ರಾಮ |

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಈ ಹಂತದಲ್ಲಿ ಸಾಕ್ಷಿಗೆ ನಿಪಿ-3 ರಂತೆ ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿಪಿ-3(ಬಿ)** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ನಿಪಿ-1 ರಂತೆ ನೋಟಿಸಿನ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಯಾವುದೋ ಕೆಲಸಕ್ಕೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಮಾಡಿದ್ದು, ಅವುಗಳಲ್ಲಿ ಏನು ಬರೆದಿದೆ ನನಗೆ ಓದಿ ಹೇಳಲಿಲ್ಲ.

ಅಲ್ಲದೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ನಿಪಿ-4 ರಂತೆ ಫೋಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದರೂ ಸಹ ಸದರಿ ಫೋಟೊವನ್ನು ಎಲ್ಲಿ ಮತ್ತು ಯಾವ ವಿಚಾರವಾಗಿ ತೆಗೆಯಲಾಗಿದೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿನಾಂಕ 03.03.2024 ರಂದು ರಾತ್ರಿ 7.55 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 3 ರವರು ಯಗಟಿ ಸಂತೆ ಮೈದಾನದಲ್ಲಿ ಕುಳಿತ್ತಿದ್ದಾಗ ಚಾಸಾ 1 ರವರು ಇಲಾಖಾ ಜೀಪಿನಲ್ಲಿ ಬಂದು ಹರಿಸಮುದ್ರ ಹೋಗುವ ರಸ್ತೆಯಲ್ಲಿ ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಪಂಚರಾಗಿ ಹಾಜರಾಗಲು ತಿಳಿಸಿ ನಿಪಿ-1 ರಂತೆ ನಮಗೆ ನೋಟಿಸು ನೀಡಿದರು ಎಂದರೆ ಸರಿಯಲ್ಲ. ನಂತರ ಸದರಿ ಇಲಾಖಾ ಜೀಪಿನಲ್ಲಿ ನಮ್ಮನ್ನು ಹರಿಸಮುದ್ರ ಕಡೆ ಕರೆದುಕೊಂಡು ಹೋಗಿದ್ದು, ಅಲ್ಲಿ ಒಬ್ಬ ಆಸಾಮಿಯು ಕೈಯಲ್ಲಿ ಚೀಲ ಹಿಡಿದುಕೊಂಡು ಓಡಿಹೋಗಲು ಪ್ರಯತ್ನಿಸಿದ್ದು, ಆತನು ನ್ಯಾಯಾಲಯದಲ್ಲಿರುವ ಆರೋಪಿ ಎಂದರೆ ಸರಿಯಲ್ಲ. ನಂತರ ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಚಾಸಾ 1 ರವರು ತೆರೆದು ನೋಡಲಾಗಿ, ಅದರಲ್ಲಿ 90 ಎಮ್.ಎಲ್ ನಂ 30 ರಾಜಾವಿಸ್ಕಿ ಪೌಚುಗಳಿದ್ದವು ಎಂದರೆ ಸರಿಯಲ್ಲ. ಅಲ್ಲದೆ ಅವುಗಳನ್ನು ಮಾರಾಟ ಮಾಡಲು ತನ್ನ ಬಳಿ ಪರವಾನಗಿ ಇಲ್ಲವೆಂದು ಆರೋಪಿ ತಿಳಿಸಿದರು ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ನಿಪಿ-3 ರಂತೆ ಪಂಚನಾಮೆ ಜರುಗಿಸಿ, ಸದರಿ ಮದ್ಯವನ್ನು ವಶಪಡಿಸಿಕೊಂಡು, ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ ಆರ್ ಎಂಬ ಅಕ್ಷರದಿಂದ ಮೊಹರು ಮಾಡಿದ್ದು, ಆ ಸಮಯದಲ್ಲಿ ನಿಪಿ-3 ರ ಪ್ರತಿಗೆ ನಾನು ಮತ್ತು ಚಾಸಾ 3 ರವರು ಸಹಿ ಮಾಡಿದ್ದು, ನಿಪಿ-4 ರಂತೆ ಆ ಸಮಯದಲ್ಲಿ ಫೋಟೋ

ತೆಗೆಯಲಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ಈ ರೀತಿ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 180 ರಂತೆ ಪೊಲೀಸರ ಮುಂದೆ ನೀಡಿದ ಹೇಳಿಕೆಯ ಭಾಗವನ್ನು ಈ ಕೆಳಕಂಡಂತೆ ಓದಿ ಹೇಳಲಾಗಿ, ಸಾಕ್ಷಿಯು ಅದನ್ನು ನಿರಾಕರಿಸಿದರು. ಸದರಿ ಹೇಳಿಕೆಯ ಭಾಗವನ್ನು **ನಿಪಿ–6** ಎಂದು ಗುರುತಿಸಲಾಯಿತು.

ನಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ . ಎಸ್.ಎನ್.ಎ ವಕೀಲರಿಂದ, ಆರೋಪಿತರ ಪರವಾಗಿ**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/–

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಕಡೂರು.